ತೆರೆದ - ಅಂಚೆ

# ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್ ನಿ.,

## ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು

ಮೇಲ್ಕಂಡ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣಾ ದಿನಾಂಕದಿಂದ

ಮುಂದಿನ ಐದು (5) ವರ್ಷಗಳ ಅವಧಿಗೆ

# ಚುನಾವಣಾ ನೋಟೀಸ್ ಹಾಗೂ ವೇಳಾಪಟ್ಟಿ

ದಿನಾಂಕ : **16-02-2025**ನೇ ಭಾನುವಾರ

ಸಮಯ: ಬೆಳಗ್ಗೆ **9-00** ಗಂಟೆಯಿಂದ ಸಂಜೆ **4-00** ಗಂಟೆವರೆಗೆ

## ಮತದಾನದ ಸ್ಥಳ :

ಮೈಸೂರು ವಿಭಾಗ : **ವಿದ್ಯಾವರ್ಧಕ ಪದವಿ ಮತ್ತು ಕಾನೂನು ಕಾಲೇಜು**
ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು

ಬೆಂಗಳೂರು ವಿಭಾಗ : **ಸೌತ್ ವೆಸ್ಟರ್ನ್ ರೈಲ್ವೆ ಇನ್ಸ್ಟಿಟ್ಯೂಟ್**
ಎಂ.ಜಿ. ರೈಲ್ವೆ ಕಾಲೋನಿ, ಸ್ಪೋರ್ಟ್ಸ್ ಗ್ರೌಂಡ್ ಪಕ್ಕ, ಬೆಂಗಳೂರು - 560 023

ಹುಬ್ಬಳ್ಳಿ ವಿಭಾಗ : **ಜಾಕೋಬ್ ಚೆಲ್ಲಿ ಮೆಮೋರಿಯಲ್ ಇಂಗ್ಲೀಷ್ ಮೀಡಿಯಂ ಸ್ಕೂಲ್**
ಗದಗ ರಸ್ತೆ, ಹುಬ್ಬಳ್ಳಿ - 580 020

ಶ್ರೀಮತಿ / ಶ್ರೀ ..............................................................................

..............................................................................

..............................................................................

ಸೂಚನೆ : 1) ಆಯಾಯ ವಿಭಾಗದ ಸದಸ್ಯರು ಆಯಾಯ ವಿಭಾಗದ ಮತಕ್ಷೇತ್ರದಲ್ಲಿ ಮಾತ್ರ ಮತ ಚಲಾಯಿಸಲು ಅವಕಾಶವಿರುತ್ತದೆ.

2) ಅರ್ಹ ಮತದಾರರು ಚುನಾವಣೆಯಲ್ಲಿ ಮತ ಚಲಾಯಿಸಲು ಬ್ಯಾಂಕಿನಿಂದ ನೀಡಿರುವ ಗುರುತಿನ ಕಾರ್ಡ್‌ನ್ನು ಕಡ್ಡಾಯವಾಗಿ ಹಾಜರುಪಡಿಸುವುದು. ತಪ್ಪಿದಲ್ಲಿ ಮತದಾನ ಮಾಡಲು ಅವಕಾಶವಿರುವುದಿಲ್ಲ.

# ದಿ ರೈಲ್ವೆ ಕೋ - ಆಪರೇಟಿವ್ ಬ್ಯಾಂಕ್ ನಿ.,

## ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು

### ಇದರ ರಿಟರ್ನಿಂಗ್ ಆಫೀಸರ್ ರವರ ಕಾರ್ಯಾಲಯದಿಂದ ಚುನಾವಣಾ ನೋಟೀಸ್ ಹಾಗೂ ವೇಳಾಪಟ್ಟಿ

ದಿ ರೈಲ್ವೆ ಕೋ - ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ:ಸಚುಪ್ರಾ/ಮೈ.ಪ್ರಾ/ಮೈ.ಜಿ/ಜಂ.ನಿ/ಅಮಚು-ರಿಆನೇ/46/2024 ದಿ:06-12-2024ರನ್ವಯ ರಿಟರ್ನಿಂಗ್ ಆಫೀಸರ್ ಆಗಿ ಬೀರೇಂದ್ರ, ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಆದ ನನ್ನನ್ನು ನೇಮಕ ಮಾಡಿ ಆದೇಶಿಸಿದ್ದು, ಸದರಿ ಆದೇಶದನ್ವಯ ಈ ಬ್ಯಾಂಕಿನ ಉಪನಿಯಮ, ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960ರ ಅಂಶಗಳನ್ವಯ ಮತ್ತು ಮಾನ್ಯ ಚುನಾವಣಾ ಪ್ರಾಧಿಕಾರದ ನಿರ್ದೇಶನದನ್ವಯ **ದಿನಾಂಕ : 16-2-2025 ರ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ವಿದ್ಯಾವರ್ಧಕ ಪದವಿ ಮತ್ತು ಕಾನೂನು ಕಾಲೇಜು, ಮೈಸೂರು, ಸೌತ್ ವೆಸ್ಟರ್ನ್ ರೈಲ್ವೆ ಇನ್ಸ್ಟಿಟ್ಯೂಟ್, ಬೆಂಗಳೂರು ಹಾಗೂ ಜಾಕೋಬ್ ಚೆಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್, ಹುಬ್ಬಳ್ಳಿ** ಇಲ್ಲಿ ಸಾಮಾನ್ಯ, ಹಿಂದುಳಿದ ವರ್ಗ (ಪ್ರವರ್ಗ-ಎ), ಹಿಂದುಳಿದ ವರ್ಗ (ಪ್ರವರ್ಗ-ಬಿ), ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳಾ ಮೀಸಲು ಸ್ಥಾನಗಳಿಗೆ ಆಡಳಿತ ಮಂಡಳಿಯ ನಿರ್ದೇಶಕರುಗಳ ಚುನಾವಣೆ ಸಂಬಂಧ ಚುನಾವಣೆಯನ್ನು ಜರುಗಿಸಲಾಗುವುದೆಂದು ನೋಟೀಸ್ ನೀಡಲಾಗಿದೆ. ಈ ನೋಟೀಸ್‌ನೊಂದಿಗೆ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

| ಕ್ರ.ಸಂ. ವಿವರಗಳು | ದಿನಾಂಕ / ವಾರ / ಸ್ಥಳ / ವೇಳೆ ಮತ್ತು ವಿವರ |
|---|---|
| 1. ನಿಯಮ 14ಎ ರಂತೆ ನಾಮಿನೇಷನ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | **ದಿ:02-02-2025ನೇ ಭಾನುವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆಯವರಿಗೆ ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರಿನಲ್ಲಿರುವ ದಿ ರೈಲ್ವೆ ಕೋ - ಆಪರೇಟಿವ್ ಬ್ಯಾಂಕ್ ನಿ., ಇದರ ಕೇಂದ್ರ ಕಛೇರಿ, ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ರವರಿಗೆ.** |
| 2. ನಿಯಮ 14ಎ ರಂತೆ ನಾಮಿನೇಷನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | ದಿ:08-02-2025ನೇ ಶನಿವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆ ಒಳಗೆ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ರವರಿಗೆ. |
| 3. ನಿಯಮ 14ಬಿ(1)ರಂತೆ ನಾಮಿನೇಷನ್ ಅರ್ಜಿಗಳನ್ನು ಪರಿಶೀಲಿಸುವುದು. | ದಿ : 09-02-2025ನೇ ಭಾನುವಾರ ಬೆಳಗ್ಗೆ 11-00 ಗಂಟೆಗೆ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್ ರವರಿಂದ |
| 4. ನಿಯಮ14ಬಿ (4)ರಂತೆ ಅರ್ಹತೆ ಪಡೆದ ನಾಮಿನೇಷನ್ ಪಟ್ಟಿ ಪ್ರಕಟಿಸುವುದು | ದಿ :09-02-2025ನೇ ಭಾನುವಾರ ನಾಮಪತ್ರಗಳ ಪರಿಶೀಲನೆಯ ನಂತರ ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್ ರವರಿಂದ |
| 5. ನಿಯಮ14 ಸಿ(1)ರಂತೆ ನಾಮಿನೇಷನ್ ಅರ್ಜಿಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | ದಿ:10-02-2025ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ಒಳಗೆ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ರವರಿಗೆ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ |
| 6. ನಿಯಮ 14 ಡಿ (1) ರಂತೆ ಅರ್ಹತೆ ಪಡೆದವರ ಅಂತಿಮ ಪಟ್ಟಿ ಪ್ರಕಟಿಸುವುದು | ದಿ:10-02-2025ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ರವರಿಂದ |
| 7. ನಿಯಮ 14 ಇ ರಂತೆ ಚುನಾವಣೆ ನಡೆಸ ಬೇಕಾದಲ್ಲಿ ಅರ್ಹತೆ ಪಡೆದವರಿಗೆ ಚಿಹ್ನೆ ನೀಡುವುದು | ದಿ:10-02-2025ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ನಂತರ ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ರವರಿಂದ |

| ಕ್ರ.ಸಂ. | ವಿವರಗಳು | ದಿನಾಂಕ / ವಾರ / ಸ್ಥಳ / ವೇಳೆ ಮತ್ತು ವಿವರ |
|---|---|---|
| 8. | ನಿಯಮ 14ಇ ರಂತೆ ಚುನಾವಣೆಗೆ ಸ್ಪರ್ಧಿಸಲು ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿ, ಚಿಹ್ನೆ ಸಮೇತ ಪ್ರಕಟಣೆ | ದಿ:11-02-2025ನೇ ಮಂಗಳವಾರ ಬೆಳಗ್ಗೆ 11-30 ಗಂಟೆಗೆ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್ ರವರಿಂದ ಬ್ಯಾಂಕಿನ ಕೇಂದ್ರ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಣೆ |
| 9. | ಚುನಾವಣೆ ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ | **ದಿ : 16-02-2025ನೇ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ**<br>ಮೈಸೂರು : ವಿದ್ಯಾವರ್ಧಕ ಪದವಿ ಮತ್ತು ಕಾನೂನು ಕಾಲೇಜು, ಮೈಸೂರು<br>ಬೆಂಗಳೂರು : ಸೌರ್ತ್ ವೆಸ್ಟರ್ನ್ ರೈಲ್ವೆ ಇನ್ಸಿಟ್ಯೂಟ್, ಬೆಂಗಳೂರು<br>ಹುಬ್ಬಳ್ಳಿ : ಜಾಕೋಬ್ ಚಿಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್, ಹುಬ್ಬಳ್ಳಿ ಇಲ್ಲಿ ನಡೆಸಲಾಗುವುದು |
| 10. | ಮತಗಳ ಎಣಿಕೆಯ ದಿನಾಂಕ ಹಾಗೂ ವೇಳೆ | ದಿ:16-02-2025ರಂದು ಮತದಾನ ಮುಕ್ತಾಯವಾದ ನಂತರ ಮತದಾನ ನಡೆದ ಆಯಾಯ ಕೇಂದ್ರಗಳಲ್ಲಿ ಮತ ಎಣಿಕೆ ನಡೆಸಲಾಗುತ್ತದೆ. |
| 11. | ರಿಟರ್ನಿಂಗ್ ಆಫೀಸರ್‌ರವರಿಂದ ಚುನಾವಣಾ ಫಲಿತಾಂಶ ಪ್ರಕಟಣೆ | ದಿ:16-02-2025ರಂದು ಮತಗಳ ಎಣಿಕೆ ಮುಕ್ತಾಯವಾದ ನಂತರ ವಿದ್ಯಾವರ್ಧಕ ಪದವಿ ಕಾಲೇಜು, ಮೈಸೂರು ಇದರ ಆವರಣದಲ್ಲಿ ರಿಟರ್ನಿಂಗ್ ಆಫೀಸರ್‌ರವರಿಂದ ಫಲಿತಾಂಶ ಪ್ರಕಟಣೆ. |

## ಸೂಚನೆಗಳು :

1. ಚುನಾವಣೆಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರನ್ವಯ ಹಾಗೂ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 3ರನ್ವಯ) ಮತ್ತು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ರನ್ವಯ ನಡೆಯಲಿದೆ.
2. ಬ್ಯಾಂಕಿನ ಉಪನಿಯಮದನ್ವಯ ಆಡಳಿತ ಮಂಡಳಿಗೆ ಒಟ್ಟು 15 (ಹದಿನೈದು) ನಿರ್ದೇಶಕರುಗಳನ್ನು ಚುನಾಯಿಸಬೇಕಾಗಿರುತ್ತದೆ.

   ಈ ಪೈಕಿ

| | | |
|---|---|---|
| 1. | ಸಾಮಾನ್ಯ ಸದಸ್ಯರಿಗೆ | 9 ಸ್ಥಾನಗಳು |
| 2. | ಪರಿಶಿಷ್ಟ ಜಾತಿ ಸದಸ್ಯರಿಗೆ | 1 ಸ್ಥಾನ ಮೀಸಲಾಗಿರುತ್ತದೆ |
| 3. | ಪರಿಶಿಷ್ಟ ಪಂಗಡದ ಸದಸ್ಯರಿಗೆ | 1 ಸ್ಥಾನ ಮೀಸಲಾಗಿರುತ್ತದೆ |
| 4. | ಮಹಿಳಾ ಸದಸ್ಯರಿಗೆ | 2 ಸ್ಥಾನ ಮೀಸಲಾಗಿರುತ್ತದೆ |
| 5. | ಹಿಂದುಳಿದ ವರ್ಗದ (ಪ್ರವರ್ಗ-"ಎ") ಸದಸ್ಯರಿಗೆ | 1 ಸ್ಥಾನ ಮೀಸಲಾಗಿರುತ್ತದೆ |
| 6. | ಹಿಂದುಳಿದ ವರ್ಗದ (ಪ್ರವರ್ಗ-"ಬಿ") ಸದಸ್ಯರಿಗೆ | 1 ಸ್ಥಾನ ಮೀಸಲಾಗಿರುತ್ತದೆ |

3. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ ಪ್ರವರ್ಗ 'ಎ' ಮತ್ತು ಪ್ರವರ್ಗ 'ಬಿ' ಯಲ್ಲಿ ಸೂಚಿಸಿರುವ ಸಕ್ಷಮ ಪ್ರಾಧಿಕಾರದಿಂದ ಚುನಾವಣೆಗಾಗಿ ನೀಡುವ ಜಾತಿ ಪ್ರಮಾಣ ಪತ್ರವನ್ನು ನಾಮಪತ್ರದೊಡನೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು ಅಥವಾ ಪರಿಶೀಲನಾ ಅವಧಿಯೊಳಗೆ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
4. ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಚುನಾಯಿತರಾಗಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಹಾಗೂ ಬ್ಯಾಂಕಿನ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.
5. ನಾಮಿನೇಷನ್ ಅರ್ಜಿ ಸಲ್ಲಿಸುವವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಹಾಗೂ ಬ್ಯಾಂಕಿನ ಉಪನಿಯಮಗಳನ್ವಯ ಯಾವುದೇ ಅನರ್ಹತೆಗಳನ್ನು ಹೊಂದಿರಬಾರದು.
6. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಚಿಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ಬ್ಯಾಂಕಿನ ಕಛೇರಿಯ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದು.
7. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 ಎ (I) ರಂತೆ ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಆಫೀಸರ್‌ಗೆ ಬ್ಯಾಂಕಿನ ಕಛೇರಿಯಲ್ಲಿ ನಾಮಪತ್ರಗಳನ್ನು ನಮೂನೆ XIII ರಲ್ಲಿ ಭರ್ತಿ ಮಾಡಿ ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯನು ಸೂಚಕನಾಗಿ ಯುಕ್ತವಾಗಿ ರುಜು ಮಾಡಿರುವ ನಾಮಪತ್ರಗಳನ್ನು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಅಂತಹ ನಾಮಪತ್ರವು ಅಭ್ಯರ್ಥಿಯು ಬ್ಯಾಂಕಿನ ಆಡಳಿತ ಮಂಡಳಿಗೆ ಸಾಮಾನ್ಯ ಮತ ಕ್ಷೇತ್ರದಿಂದ ಅಥವಾ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಅಥವಾ ಮಹಿಳೆಯರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಮತ್ತು ಆತನ ಸಹಿಯುಳ್ಳ ಘೋಷಣೆಯನ್ನು ಒಳಗೊಂಡಿರತಕ್ಕದ್ದು.
8. ಒಬ್ಬ ಸ್ಪರ್ಧಾಳು ಒಂದು ಮತಕ್ಷೇತ್ರಕ್ಕಿಂತ/ಸ್ಥಾನಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ/ಸ್ಥಾನಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ/ ಸ್ಪರ್ಧಿಸತಕ್ಕದಲ್ಲ.

ಪ್ರತಿಯೊಂದು ನಾಮಪತ್ರವು ಒಬ್ಬ ಸೂಚಕನಿಂದ ಸೂಚಿಸಲ್ಪಟ್ಟಿರಬೇಕು. ಒಬ್ಬ ಸೂಚಕನು ಒಬ್ಬ ಅಭ್ಯರ್ಥಿಗಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಸೂಚಿಸತಕ್ಕದ್ದಲ್ಲ.

9. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 ಎ (3) ರಂತೆ ಚುನಾವಣೆಯಲ್ಲಿ ಸ್ಪರ್ಧಿಸಬಯಸುವ ಉಮೇದುವಾರರು ಸಾಮಾನ್ಯ ಸ್ಥಾನಗಳಿಗೆ 2000.00 (ಎರಡು ಸಾವಿರ ರೂಪಾಯಿಗಳು ಮಾತ್ರ) ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳು 1000.00 (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಸಂಘದ ಹೆಸರಿಗೆ ಲೇವಣಿಸಿದ ರಶೀತಿಯನ್ನು ಒಳಗೊಂಡಂತೆ ನಾಮಪತ್ರವನ್ನು ಸಲ್ಲಿಸತಕ್ಕದ್ದು.

10. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 ಸಿ (3) ರನ್ವಯ ಅಭ್ಯರ್ಥಿಯು ನಾಮಪತ್ರವನ್ನು ಹಿಂತೆಗೆದುಕೊಳ್ಳಲು ಒಂದು ಬಾರಿ ಸಲ್ಲಿಸಿದ ನೋಟೀಸನ್ನು ಪುನ: ವಾಪಸ್ ಪಡೆಯಲು ಅವಕಾಶವಿರುವುದಿಲ್ಲ.

11. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 ಎಚ (4) ರಂತೆ ಚುನಾವಣೆಯಲ್ಲಿ ಸ್ಪರ್ಧಿಸಿದ ಯಾವುದೇ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತವಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ ಆರನೇ ಒಂದರಷ್ಟು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳನ್ನು ಅವನು ಪಡೆಯದಿದ್ದಲ್ಲಿ, ಆತನ ಠೇವಣಿಯನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪರಂತು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗ ಪ್ರವರ್ಗ 'ಎ' ಮತ್ತು ಪ್ರವರ್ಗ 'ಬಿ'ಗೆ ಸೇರಿದ ಅಭ್ಯರ್ಥಿಯ ಅಥವಾ ಮಹಿಳಾ ಅಭ್ಯರ್ಥಿಯ ಸಂಬಂಧದಲ್ಲಿ, ಆತನು/ಅವಳು ಪಡೆದ ಕ್ರಮಬದ್ಧ ಮತಗಳ ಸಂಖ್ಯೆಯು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕಿಂತ ಕಡಿಮೆ ಇದ್ದಲ್ಲಿ, ಆತನ/ಅವಳ ಠೇವಣಿಯನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

12. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 (ಇ) ರನ್ವಯ ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷ ಅಂದರೆ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಚಿಸುವ ಉಮೇದುವಾರರು ಕೆಳಗೆ ನಮೂದಿಸಿರುವ ಚಿಹ್ನೆಗಳ ಪೈಕಿ ಯಾವುದಾದರೂ ಮೂರು ಚಿಹ್ನೆಗಳನ್ನು ತಮ್ಮ ಅರ್ಜಿಯಲ್ಲಿ ನಮೂದಿಸುವುದು. ಆದರೆ ಚಿಹ್ನೆ ನೀಡುವ ಅಧಿಕಾರ ಅಂತಿಮವಾಗಿ ರಿಟರ್ನಿಂಗ್ ಆಫೀಸರ್ ರವರಿಗೆ ಇರುತ್ತದೆ.

1. ಕಪಾಟು 2. ಏರ್‌ಕಂಡೀಷನರ್ 3. ಗಾಜಿನ ಲೋಟ 4.ಬಲೂನ್ 5.ಹಣ್ಣುಗಳ ಬುಟ್ಟಿ 6. ಬ್ಯಾಟ್ 7. ಬ್ಯಾಟ್ಸ್‌ಮನ್ 8.ತಕ್ಕಡಿ 9. ಟೇಬಲ್ 10. ಕಪ್ಪುಹಲಗೆ (ಬ್ಲಾಕ್ ಬೋರ್ಡ್) 11. ಕುರ್ಚಿ 12.ಗೋಪುರ 13. ಬ್ರಿಫ್‌ಕೇಸ್ 14. ಕಿಟಕಿ 15. ಕಾರು 16. ಬಕೀಟ್ 17. ಏರೋಪ್ಲೇನ್ 18. ಸೂರ್ಯ 19. ಕ್ಯಾಮರಾ 20. ಮೇಣದಬತ್ತಿ 21. ಕೇರಂಬೋರ್ಡ್ 22. ಬಸ್ಸು 23. ಕ್ಯಾರೆಟ್ 24. ಹೂಕೋಸು 25. ಕೊಳಾಯಿ 26. ಗಡಿಯಾರ 27. ಕೋಟು 28. ಸೀಟಿ 29. ಮಂಚ 30. ಕಿರೀಟ 31. ಕಪ್ ಅಂಡ್ ಸಾಸರ್ 32. ಕಟ್ಟಿಂಗ್ ಪ್ಲೈಯರ್ 33. ಬಲ್ಬ್ 34. ಡೀಸಲ್ ಪಂಪು 35. ಡಿಶ್‌ಅಂಟೆನಾ 36. ರೈಲ್ವೆ ಇಂಜಿನ್ 37. ವಿದ್ಯುತ್ ಕಂಬ 38. ಶಂಖ 39. ವೀಣೆ 40. ಲಂಗ (ಫ್ರಾಕ್) 41. ಮುತ್ತಿನ ಹಾರ 42. ಗುಡಿಸಲು 43. ಗ್ಯಾಸ್ ಸಿಲೆಂಡರ್ 44. ಗ್ಯಾಸ್ ಸ್ಟೌವ್ 45. ಆಟೋರೀಕ್ಷಾ 46. ದ್ರಾಕ್ಷಿ 47. ಹಾರ್ಮೋನಿಯಂ 48. ಟೋಪಿ 49. ದೀಪ 50. ಹಾಕಿ ಬ್ಯಾಟು ಮತ್ತು ಚೆಂಡು 51. ರೋಡ್‌ರೋಲರ್ 52. ಇಸ್ತ್ರಿಪೆಟ್ಟಿಗೆ 53. ಕೆಟಲ್ 54. ಗಾಳಿಪಟ 55. ಗುಲಾಬಿ ಹೂವು 56. ಅಂಚೆಪೆಟ್ಟಿಗೆ 57. ಮಿಕ್ಸಿ 58. ನೇಲ್ ಕಟರ್ 59. ನೆಕ್ ಟೈ 60. ಪೆನ್‌ಸ್ಟಾಂಡ್ 61. ಬುಗುರಿ 62. ಪ್ಲೇಟ್ ಸ್ಟಾಂಡ್ 63. ಕುಡಿಕೆ 64. ಪ್ರೆಷರ್ ಕುಕ್ಕರ್ 65. ಬೀಗ ಮತ್ತು ಕೀ 66. ರೆಫ್ರಿಜರೇಟರ್ 67. ಉಂಗುರ 68. ಗರಗಸ 69. ಸ್ಕೂಲ್‌ಬ್ಯಾಗ್ 70. ಕತ್ತರಿ 71. ಹೊಲಿಗೆ ಯಂತ್ರ 72. ಶಟಲ್ 73. ಸ್ಲೇಟ್ 74. ಸ್ಟೆತೊಸ್ಕೋಪ್ 75. ಸ್ಟೂಲ್ 76. ಟೇಬಲ್ 77. ಟೇಬಲ್ ಲ್ಯಾಂಪ್ 78. ದೂರವಾಣಿ (ಟೆಲಿಫೋನ್) 79. ದೂರದರ್ಶನ (ಟೆಲಿವಿಷನ್) 80. ಸ್ಕೂಟರ್ 81. ಟೂಥ್‌ಬ್ರಷ್ 82. ತುತ್ತೂರಿ 83. ಪಿಟೀಲು (ವಾಯೋಲಿನ್) 84. ವಾಕಿಂಗ್‌ಸ್ಟಿಕ್ 85. ಅನಾನಸ್ 86. ಕೊಳಲು 87. ಸೇಬು 88. ಗಂಟೆ 89. ದೀಪಾಲೆ ಕಂಬ 90. ಕೈ ಪಂಪು 91. ತೆಂಗಿನಕಾಯಿ 92. ಜೋಡಿ ತೆಂಗಿನಮರ 93.ಲಾರಿ 94.ಬಾಳೆಗೊನೆ 95. ನೇಗಿಲು 96. ಜೀಪು 97.ಪೆನ್ನು 98. ಸೀಲಿಂಗ್‌ಫ್ಯಾನ್

13. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 14 (ಓ) ರಂತೆ ಮತದಾನ ಮಾಡುವ ಸಂದರ್ಭದಲ್ಲಿ ಪ್ರತಿಯೊಬ್ಬ ಮತದಾರನು ನಿಯಮ 13(ಎ) ಅಡಿ ಬ್ಯಾಂಕಿನಿಂದ ನೀಡಲಾದ ತಮ್ಮ ಭಾವಚಿತ್ರವುಳ್ಳ ಗುರುತಿನ ಕಾರ್ಡ್‌ನ್ನು ಮತ್ತು ಮತದಾನದ ಚೀಟಿಯನ್ನು ಹಾಜರುಪಡಿಸಿ ಮತದಾನ ಮಾಡುವ ಸ್ಥಳದಲ್ಲಿ ಇಡಲಾಗುವ ರಿಜಿಸ್ಟರ್‌ನಲ್ಲಿ ಸಹಿ ಮಾಡಿ ಮತದಾನ ಮಾಡತಕ್ಕದ್ದು. ತಪ್ಪಿದಲ್ಲಿ ಮತದಾನ ಮಾಡಲು ಅವಕಾಶವಿರುವುದಿಲ್ಲ.

14. ಬ್ಯಾಂಕಿನ ಸಂಘದ ಅರ್ಹ ಮತದಾರರ ಪಟ್ಟಿಯಲ್ಲಿರುವ ಸದಸ್ಯರು ಮಾತ್ರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತದಾನ ಮಾಡಲು ಅರ್ಹರಾಗಿರುತ್ತಾರೆ.

ಸಹಿ

(ಬೀರೇಂದ್ರ)

ರಿಟರ್ನಿಂಗ್ ಆಫೀಸರ್,

ದಿ ರೈಲ್ವೆ ಕೋ - ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಹಾಗೂ

ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು

ಸ್ಥಳ : ಮೈಸೂರು

ದಿನಾಂಕ : 29-01-2025